ವ್ಯವಸ್ಥಾಪಕ ನಿರ್ದೇಶಕರ ಕಛೇರಿ
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ಕಾವೇರಿ ಭವನ, 9ನೇ ಮಹಡಿ,ಇ ಮತ್ತು ಎಫ್ ಬ್ಲಾಕ್,
ಕೆ.ಜಿ.ರಸ್ತೆ, ಬೆಂಗಳೂರು–560 009
ದೂರವಾಣಿ : 080 2210 6888 ಫ್ಯಾಕ್ಸ್: 080 22247317
ಇ–ಮೇಲ್ : rgrhcl@rediffmail.com

MD RGRHCL 14 PGG 01 2018-19 Date:25.08.2018

ರಿಗೆ,
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ.

ಮಾನ್ಯರೇ,

ವಿಷಯ : ಪ್ರಧಾನ ಮಂತ್ರಿಆವಾಸ್ ಯೋಜನೆ (ಗ್ರಾಮೀಣ) ಅಡಿಯಲ್ಲಿ ಆಡಳಿತಾತ್ಮಕ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಮಾದರಿ ಮನೆಗಳನ್ನು ನಿರ್ಮಿಸುವ ಬಗ್ಗೆ

ಉಲ್ಲೇಖ 1. ನಿಗಮದ ಪತ್ರಸಂಖ್ಯೆ: MD RGRHCL 04 PGG01 2018-19 Date: 24.05.2018
2. ನಿಗಮದ ಪತ್ರಸಂಖ್ಯೆ: MD RGRHCL 08 PGG 02 2017-18Date: 14.11.2017

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತಪತ್ರ (1) ರಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) ಯಡಿಯಲ್ಲಿ ಆಡಳಿತ್ಮಾಕ ವೆಚ್ಚದಡಿ ತಯಾರಿಸಲಾದ ಕ್ರಿಯಾ ಯೋಜನೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ 2 ಮಾದರಿ ಮನೆಗಳನ್ನು ಹವಾಮಾನ ಪರಿಸ್ಥಿತಿಗಳು, ವಿಪತ್ತು ಅಪಾಯದ ಅಂಶಗಳು, ಸ್ಥಳೀಯ ನಿರ್ಮಾಣ ಸಾಮಗ್ರಿಗಳು ಮತ್ತು ಸಾಂಪ್ರದಾಯಿಕ ಕೌಶಲ್ಯದ ಅಧಾರದ ಮೇಲೆ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.

ನಿಗಮದಿಂದ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಈಗಾಗಲೇ ತಮಗೆ ಕಳುಹಿಸಲಾಗಿದ್ದು, ಮತ್ತೊಮ್ಮೆ ಈ ಪತ್ರದೊಂದಿಗೆ ಲಗತ್ತಿಸಿದೆ. ಅದರಂತೆ ಅಥವಾ ಸ್ಥಳೀಯ ಅವಶ್ಯಕತೆಗನುಗುಣವಾಗಿ ತಮ್ಮ ಮಟ್ಟದಲ್ಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಅಥವಾ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಅಥವಾ ಇತರೆ ಪ್ರದೇಶದಲ್ಲಿ ಸಾರ್ವಜನಿಕ ವೀಕ್ಷಣೆಗೆ ಅನುಕೂಲವಾಗುವಂತೆ 2 ಮಾದರಿ ಮನೆಗಳನ್ನು ನಿರ್ಮಿಸಲು ಕ್ರಮವಹಿಸಲು ಕೋರಿದೆ. ಮಾದರಿ ಮನೆಗಳನ್ನು ನಿರ್ಮಿಸಲು ಪ್ರತಿ ಮನೆಗೆ ಕನಿಷ್ಟ ರೂ.2.5 ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು, ಸ್ಥಳಿಯ ಅವಶ್ಯಕತೆಗೆ ಅನುಗುಣವಾಗಿ ಅನುದಾನವನ್ನು ರೂ 5.00 ಲಕ್ಷದವರೆಗೆ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನೀಡಲಾದ ಅನುದಾನದಲ್ಲಿ ಮೀಸಲಿಡಲಾಗಿದ್ದು, ಸದರಿ ಅನುದಾನವು ಈಗಾಗಲೇ ಜಿಲ್ಲಾ ಪಂಚಾಯಿತಿಯಲ್ಲಿ ಲಭ್ಯವಿದ್ದು, ಈ ಅನುದಾನವನ್ನು ಉಪಯೋಗಿಸಿಕೊಂಡು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕುಪಂಚಾಯಿತಿ, ಇವರ ಮೂಲಕ ಮಾದರಿ ಮನೆಗಳನ್ನು ನಿರ್ಮಿಸಲು ಕ್ರಮವಹಿಸಲು ಕೋರಿದೆ. ಮಾದರಿ ಮನೆ ನಿರ್ಮಾಣ ಮಾಡಿದ ನಂತರ ಇದಕ್ಕೆ ಸಂಬಂಧಿಸಿದಂತೆ ತಗುಲಿದ ಖರ್ಚುವೆಚ್ಚ ಮತ್ತು ಇತರ ಸಂಪೂರ್ಣ ಮಾಹಿತಿಯನ್ನು ಸ್ಪಷ್ಟವಾಗಿ ಕಾಣುವಂತೆ ಮನೆಯ ಮುಂಭಾಗಲ್ಲಿ ಬರೆಯಬೇಕು.

ಮಾದರಿ ಮನೆಗಳನ್ನು ನಿರ್ಮಿಸುವಲ್ಲಿ ಸಾಧಿಸಲಾದ ಪ್ರಗತಿಯನ್ನು ಸೆಪ್ಟೆಂಬರ್ 2018 ರ ಮೊದಲ ವಾರದಲ್ಲಿ ಮಾನ್ಯ ವಸತಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಸುವ ವಿಡೀಯೋಕಾನ್ಫರೆನ್ಸ್ ನಲ್ಲಿ ಪರಿಶೀಲಿಸಲಾಗುವುದು. ಆದ್ದರಿಂದ ಕೂಡಲೇ ಕ್ರಮವಹಿಸಿ, ಈ ಸಂಬಂಧವಾಗಿ ತೆಗೆದುಕೊಂಡ ಕ್ರಮದ ಬಗ್ಗೆ ನಿಗಮಕ್ಕೆ ವರದಿ ಮಾಡಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮವಿಶ್ವಾಸಿ

(ವಿ.ಅನ್ಬುಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು: ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.